2) ಹೊಸದುರ್ಗ ತಾಲ್ಲೂಕು ಮತ್ತೋಡು ಹೋಬಳಿಯ ಹಾಗಲಕೆರೆ ಪೋಸ್ಟ್‌ನಿಂದ ಮತ್ತೋಡು ಮಾರ್ಗವಾಗಿ ಹಿರಿಯೂರಿಗೆ ಸೇರುವ ರಸ್ತೆ ರಿಪೇರಿ ಮಾಡುವುದರ ಬಗ್ಗೆ

ಶ್ರೀ ಜಿ. ರಾಮದಾಸ್.—ಹೊಸದುರ್ಗ ಕ್ಷೇತ್ರಕ್ಕೆ ಸೇರಿದ ಮತ್ತೋಡು ಹೋಬಳಿಯಲ್ಲಿ ಹಾಗಲಕೆರೆ ಪೋಸ್ಟಿನಿಂದ ಮತ್ತೋಡು ಮಾರ್ಗವಾಗಿ, ಜಿ. ನೇರಲಕೆರೆ, ಕಟ್ಟದಾಳ್ ಮತ್ತು ಚಿಕ್ಕಬಾಲದಕೆರೆ ಕೂಡಿಸಿಕೊಂಡು ಹಿರಿಯೂರು ರೋಡಿಗೆ ಸೇರುತ್ತದೆ ಈ ರಸ್ತೆಯು ನಮ್ಮ ಕ್ಷೇತ್ರದಲ್ಲಿಯೇ ಬಹಳ ಕೆಟ್ಟ ಹೋಗಿ ಗುಂಡಿ, ಗೊಟರುಗಳು ಬಿದ್ದಿವೆ ಈ ರಸ್ತೆಯಲ್ಲಿ ಸುಮಾರು ನೂರಾರು ಸೀಮೆಂಟ್ ಲಾರಿಗಳು ಸಂಚರಿಸುತ್ತವೆ. ಅಲ್ಲದೆ ಸಿವಿಲ್ ಬಸ್ಸುಗಳ ಮತ್ತು ಒಂದು ಕೆ. ಎಸ್. ಆರ್. ಟಿ. ಸಿ. ಬಸ್ಸು ಸಹ ಸಂಚರಿಸುತ್ತಾ ಇದೆ. ಈ ವಿಚಾರವಾಗಿ ಲೋಕೋಪಯೋಗಿಯ ಸಚಿವರನ್ನು ಮತ್ತು ಅಧಿಕಾರಿಗಳನ್ನು ಎರಡು-ಮೂರು ಸಾರಿ ಸದನದಲ್ಲಿ ರಿಪೇರಿ ಮಾಡಿಸಿಕೊಡ ಬೇಕೆಂದು ಕೇಳಿಕೊಂಡರೂ ಇದುವರೆಗೂ ರಿಪೇರಿಯಾಗಲಿಲ್ಲ. ಈ ರೀತಿ ತೊಂದರೆಯಾಗಿರುವುದರಿಂದ, ಜನ ಜಾನುವಾರುಗಳಿಗೆ ಬಹಳ ತೊಂದರೆಯಾಗಿವೆ. ಬಡ ಜನಗಳಿಗೆ ಆರೋಗ್ಯದೃಷ್ಟಿಯಿಂದ ತೊಂದರೆಯಾಗುತ್ತದೆ. ಆದ್ದರಿಂದ ದಯಮಾಡಿ ಸಂಬಂಧಪಟ್ಟ ಸಚಿವರು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಇದನ್ನು ಗಮನಿಸಲಾಗಿ ಇದು ಜಿಲ್ಲಾಪರಿಷತ್‌ನ ವ್ಯಾಪ್ತಿಯಲ್ಲಿ ಬರುತ್ತದೆ. ಅದರ ಬಗ್ಗೆ ಮಾಹಿತಿಯನ್ನು ತರಿಸಿ ಅವರಿಗೆ ಒದಗಿಸಿ ಕೊಡುತ್ತೇನೆ.

3) ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯ ಅನಾನುಕೂಲಗಳನ್ನು ಸರಿಪಡಿಸುವ ಬಗ್ಗೆ.

ಶ್ರೀ ಬಸವರಾಜ್ —ಬ್ರಹ್ಮಾವರದಲ್ಲಿರುವ ದಕ್ಷಿಣ ಕನ್ನಡದ ಸಹಕಾರಿ ಸಕ್ಕರೆ ಕಾರ್ಖಾನೆ ರೈತರಿಗೆ ವರದಾನವಾಗುವ ಬದಲು 'ಬಿಳಿ ಆನೆ' ಆಗಿ ಬೆಳೆಯುತ್ತಿದೆ. ಕಬ್ಬು ಕೊಟ್ಟ ರೈತರಿಗೆ ಹಣ ಕೊಟ್ಟಿಲ್ಲ, ಕಾರ್ಖಾನೆಯ ಸಿಬ್ಬಂದಿಗಳಿಗೆ ಸೇವಾ ಭದ್ರತೆ ಇಲ್ಲ. ವ್ಯವಸ್ಥಾಪಕ ನಿರ್ದೇಶಕರ ನೇಮಕ ಕಾಗದದಲ್ಲಿ ಮಾತ್ರ ಆಗಿದ್ದು, ಕೆಲಸಕ್ಕೆ ಸೇರಲ್ಲ, ಸಕಾಲಿಕ ದುರಸ್ತಿ ಇಲ್ಲದೆ ಅವ್ಯವಸ್ಥೆ. ನೀರಿನ ಪೂರೈಕೆಗೆ ಸೂಕ್ತ ಕ್ರಮ ಕೈಗೊಂಡಿಲ್ಲ, ಕಾರ್ಖಾನೆಗೂ ನೀರಿಲ್ಲ, ರೈತರ ಜಮೀನಿಗೂ ನೀರಿಲ್ಲ. ವರಾಹಿ-ಕೃಷ್ಣ ಯೋಜನೆಗಳ ಕಾರ್ಯಾರಂಭ ಆಗಿಲ್ಲ. ಈ ಕುರಿತು ಅನೇಕಬಾರಿ ಸದನದಲ್ಲಿ ಹಾಗೂ ಇತ್ತೀಚೆಗೆ ಮಂಗಳೂರಿಗೆ ಮುಖ್ಯಮಂತ್ರಿಗಳು ಬಂದ ಸಂದರ್ಭದಲ್ಲಿ ಜಿಲ್ಲೆಯ ಶಾಸಕರು ಒತ್ತಾಯಿಸಿದ್ದರೂ ಪರಿಸ್ಥಿತಿ ಹಾಗೆಯೇ ಇದೆ. ನೀರು ಪೂರೈಕೆ, ಹಣಕಾಸಿನ ನೆರವು ಹಾಗೂ ಸೂಕ್ತ ಅನುಭವಿ ಅಧಿಕಾರಿಗಳ ನೇಮಕವನ್ನು ಶೀಘ್ರವಾಗಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಬಿ. ಪ್ರೇತದಾರ್.—ವ್ಯವಸ್ಥಾಪಕ ನಿರ್ದೇಶಕರನ್ನು ಪೋಸ್ಟ್ ಮಾಡಿದ್ದೇವೆ. ರೈತರಿಗೆ ಹಣ ಕೊಡಲಿಕ್ಕೆ ಜೈರೆಕ್ಟರ್ ಆಫ್ ಷುಗರ್ಸ್ ಅವರಿಗೆ ಪತ್ರ ಬರೆದಿದ್ದೇವೆ. ನೀರಿನ ತೊಂದರೆ ಇದೆ ಹಾಗೂ ನೀರಾವರಿ ತೊಂದರೆಯಿದೆ. ವರಾಹಿ ಯಾವಾಗ ಆಗಬಹುದೆಂದು ಹೇಳಲಿಕ್ಕೆ ನನಗೆ ಸಾಧ್ಯವಿಲ್ಲ. ಷುಗರ್ ಕೇನ್‌ಗೋಸ್ಕರ ಪಕ್ಕದ ಡಿಸ್ಟ್ರಿಕ್‌ಗಳ ಮೇಲೆ ಡಿಪೆಂಡ್ ಆಗಲಿಕ್ಕೆ ಆಗುವುದಿಲ್ಲ, ಆದರೂ ನಾವು ಸಬ್ ಕಮಿಟಿ ನೇಮಿಸಿದ್ದೇವೆ, ಅವರು ಮೊನೆ ತಾನೇ ಪ್ರವಾಸ ಮಾಡಿದ್ದಾರೆ. ಈ ತರಹ ಫ್ಯಾಕ್ಟರಿಗಳಿಗೆ ಏನು ಮಾಡಬೇಕೆನ್ನುವ ಬಗ್ಗೆ ಬೇಗನೆ ನಾವೊಂದು ಡಿಸಿಷನ್ ತೆಗೆದುಕೊಳ್ಳುತ್ತೇನೆ.

4) ಮಂಗಳೂರು ಹಳೆಬಂದರು ಮತ್ತು ಪುಲ್ಟೆ ಮೊದಲಾದ ಕಡೆಗಳಲ್ಲಿ ಹೂಳೆತ್ತದಿರುವುದರಿಂದ ಮೀನುಗಾರರಿಗೆ ಆಗಿರುವ ತೊಂದರೆ.

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರು ಹಳೆಬಂದರು, ಪುಲ್ಟೆ ಮೊದಲಾದ ಕಡೆಗಳಲ್ಲಿ ಹೂಳೆತ್ತುವ ಕೆಲಸ ಪ್ರಾರಂಭವಾಗಿದೆಯೆ ? ನಮಗೆ ಗೊತ್ತಿಲ್ಲ. ಮೀನುಗಾರರಿಗೆ ತುಂಬಾ ಕಷ್ಟನಷ್ಟ ಒದಗಿರುತ್ತದೆ. ಹೂಳೆತ್ತುವ ಕಾರ್ಯ ಯಾವಾಗ ಮುಗಿಯುತ್ತದೆ. ಮೀನುಗಾರರ ಅನೇಕ ವರ್ಷಗಳ ಈ ಬೇಡಿಕೆ ಯಾವಾಗ ಈಡೇರುತ್ತದೆ, ಇದರ ಸಂಪೂರ್ಣ ವಿವರ ಅಗತ್ಯವಾಗಿರುತ್ತದೆ. ಈ ಕುರಿತ ಮೀನುಗಾರಿಕೆ ಸಚಿವರ ಗಮನವನ್ನು ಸೆಳೆಯುತ್ತೇನೆ.